ಳನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು

ತುಮಕೂರು ನಗರಕ್ಕೆ ಹೇಮಾವತಿ ನಾಲೆಯಿಂದ ಸಮಗ್ರ ನೀರು ಸರಬರಾಜು

೩೪೧೧. ಶ್ರೀ ಷಫಿ ಅಹಮದ್ (ತುಮಕೂರು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ನಗರಕ್ಕೆ ಹೇಮಾವತಿ ನಾಲೆಯಿಂದ ನಿಯೋಜಿಸಿರುವ ಸಮಗ್ರ ನೀರು ಸರಬರಾಜು ಯೋಜನೆಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಶಫಿ ಅಹ್ಮದ್.—ಮಾನ್ಯ ಅಧ್ಯಕ್ಷರೆ, ತುಮಕೂರು ನಗರಕ್ಕೆ ನೀರನ್ನೊದಗಿಸಲು ಹೇಮಾವತಿ ಯೋಜನೆಗೆ ೧೦ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಮಂಜೂರು ಮಾಡಿದ್ದೀರಿ. ಆದರೆ ತಮ್ಮ ಉತ್ತರದಲ್ಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿಲ್ಲವೆಂದು ಹೇಳಿದ್ದಿರಿ. ಇದನ್ನು ಯಾವಾಗ ಕೊಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಕೆ. ಹೆಚ್. ಪಾಟೀಲ್ (ಶ್ರೀ ಟಿ. ಎನ್. ನರಸಿಂಹಮೂರ್ತಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ತುಮಕೂರು ದಿನೇ ದಿನೇ ದೊಡ್ಡದಾಗಿ ಬೆಳೆಯುತ್ತಿರುವ ದೊಡ್ಡ ನಗರ. ಈಗ ತುಮಕೂರಿನ ಜನರಿಗೆ ಪ್ರತಿಯೊಬ್ಬರಿಗೂ ೧೪ ಗ್ಯಾಲನ್‌ನಂತೆ ನೀರು ಒದಗಿಸಲಾಗುತ್ತಿದೆ. ಆದರೂ ಹೇಮಾವತಿಯಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ವಿಶೇಷ ಪ್ರಯತ್ನ ನಡೆದಿದೆ. ಈ ಪ್ರಯತ್ನವನ್ನು ಮಂದುವರಿಸುತ್ತೇವೆ.

ಶ್ರೀ ಶಫಿ ಅಹ್ಮದ್.—ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ನ್ನು ಯಾವಾಗ ಕೊಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಇದು ಇನ್ನೂ ವಿಚಾರಣಾ ಹಂತದಲ್ಲಿದೆ. ಆದರೂ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ನ್ನು ತೀವ್ರವಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು

ಸಕಲೇಶಪುರದಲ್ಲಿ ಒಂದೇ ಒಂದು ಕಟ್ಟಡದಲ್ಲಿ, ಪದವಿ, ಪದವಿ, ತರಗತಿಗಳು ಮತ್ತು ಪ್ರೌಢಶಾಲೆಯ ತರಗತಿಗಳನ್ನು ನಡೆಸಂತ್ತಿರುವ ಬಗ್ಗೆ

೧೨೨೦. ಶ್ರೀ ಬಿ. ಆರ್. ಗುರುದೇವ (ಸಕಲೇಶಪುರ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಕಲೇಶಪುರ ಪಟ್ಟಣದಲ್ಲಿರುವ ಒಂದೇ ಒಂದು ಕಟ್ಟಡದಲ್ಲಿ ಕಾಲೇಜು ಇದ್ದು. ಈ ಕಟ್ಟಡದಲ್ಲಿ ಪದವಿ ತರಗತಿಗಳು ಪದವಿ ಪೂರ್ವ ತರಗತಿಗಳು ಮತ್ತು ಪ್ರೌಢಶಾಲೆಯ ತರಗತಿಗಳನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಕಟ್ಟಡದಲ್ಲಿ ಕೊಠಡಿಗಳ ಕೊರತೆ ಇರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಹಾಲಿ ಕಟ್ಟಡದ ವಿಸ್ತರಣೆಗೆ ಮುಂಗಡ ಹಣವನ್ನು ಕಾಯ್ದಿರಿಸಲಾಗಿದೆಯೆ ?